# ಮಿಂಚುತ್ತಿರುವ ಕತ್ರೀನಾ



ಕತ್ರೀನಾ ಕೈಫ್ ಬಾಲಿವುಡ್‌ನಲ್ಲಿ ಮತ್ತೆ ಸುದ್ದಿ ಮಾಡುತ್ತಿದ್ದಾಳೆ. ಆಕೆ ನಟಿಸುತ್ತಿರುವ ಹೊಸ ಚಿತ್ರದ ನಾಯಕ ವರುಣ್ ಧವನ್. ಬಾಲಿವುಡ್‌ಅನ್ನು ಸದ್ಯಕ್ಕೆ ಆಳುತ್ತಿರುವ ಖಾನ್‌ತ್ರಯರ ವಯಸ್ಸು ಏರುತ್ತಿದೆ, ಅದರ ನಡುವೆಯೇ ಹೊಸ ಪೀಳಿಗೆಯ ಸೂಪರ್ ಸ್ಟಾರ್‌ಗಳೂ ಹುಟ್ಟಿಕೊಂಡಿದ್ದಾರೆ. ಅವರಲ್ಲಿ ಮುಂಚೂಣಿಯಲ್ಲಿರುವಾತ ವರುಣ್ ಧವನ್. ಈಗ ರೆಮೊ ಡಿಸೋಜಾ ನಿರ್ದೇಶಸಲಿರುವ ಹೊಸ ಚಿತ್ರಕ್ಕೆ ವರುಣ್ ಮತ್ತು ಕತ್ರೀನಾ ನಾಯಕ– ನಾಯಕಿ ಆಗಿ ಆಯ್ಕೆಯಾಗಿದ್ದಾರೆ. ಸಲ್ಮಾನ್ ಖಾನ್ ಜತೆಗೆ ಜೋಡಿಯಾಗಿ ಕತ್ರೀನಾ ಈಗಲೂ ಬಾಲಿವುಡ್‌ನಲ್ಲಿ ಜನಪ್ರಿಯತೆ ಉಳಿಸಿಕೊಂಡಿದ್ದಾಳೆ. ಆದರೆ ಈಗ ವಯಸ್ಸಿನಲ್ಲಿ ತನಗಿಂತ ಚಿಕ್ಕವನಾದ ವರುಣ್ ಜತೆಗೆ ನಾಯಕಿಯಾಗಿ ಕತ್ರೀನಾ ನಟಿಸುತ್ತಿರುವುದು ಎಲ್ಲರ ಹುಬ್ಬು ಮೇಲೇರಿಸಿದೆ!

ಕತ್ರೀನಾ ವಯಸ್ಸು 34 ದಾಟಿದ್ದರೆ, ವರುಣ್‌ಗೆ ಈಗ 30ರ ಹರೆಯ. ಹಾಗೆಂದು ಜನಪ್ರಿಯತೆಯಲ್ಲಿ ವರುಣ್ ಏನೂ ಕಡಿಮೆಯಿಲ್ಲ. 'ಸ್ಟೂಡೆಂಟ್ ಆಫ್ ದಿ ಇಯರ್' ಚಿತ್ರದ ಮೂಲಕ ಬಾಲಿವುಡ್‌ನಲ್ಲಿ ಸೂಪರ್‌ಸ್ಟಾರ್ ಆದ ವರುಣ್, ರೆಮೊ ನಿರ್ದೇಶನದ ಈ ಹೊಸ ಚಿತ್ರಕ್ಕೆ ಬರೋಬ್ಬರಿ 32 ಕೋಟಿ ರೂಪಾಯಿ ಸಂಭಾವನೆ ಪಡೆಯುತ್ತಿದ್ದಾನಂತೆ! ಕತ್ರೀನಾಗೆ ಸಿಗುವ ಸಂಭಾವನೆ 7 ಕೋಟಿ ರೂಪಾಯಿ. 'ಅಕ್ಟೋಬರ್' ಚಿತ್ರದಲ್ಲಿ ಗಳಿಕೆ ಸುಮಾರಾಗಿದ್ದರೂ ವರುಣ್ ತನ್ನ ಅಭಿನಯದಿಂದ ಎಲ್ಲರ ಮೆಚ್ಚುಗೆ ಗಳಿಸಿದ್ದು ಸುಳ್ಳಲ್ಲ. ಈಗ ಕತ್ರೀನಾ ಜೊತೆಗೆ ಆತನ ಜೋಡಿ ಎಷ್ಟರ ಮಟ್ಟಿಗೆ ಕ್ಲಿಕ್ ಆಗುತ್ತದೋ ನೋಡಬೇಕು.

ಈ ಮಧ್ಯೆ ಕತ್ರೀನಾ ತನ್ನ ತಂಗಿ ಇಸಾಬೆಲ್ಲಾಳ ಹೊಸ ಚಿತ್ರದ ಪ್ರಚಾರದಲ್ಲಿ ಬ್ಯುಸಿ ಆಗಿದ್ದಾಳೆ. ಆಕೆಯ ತಂಗಿ ಇಸಾಬೆಲ್ಲಾ ಸೂರಜ್ ಪಾಂಚೋಲಿ ಜತೆಗೆ ನಟಿಸುತ್ತಿರುವ ಹೊಸ ಚಿತ್ರದ ಹೆಸರು 'ಟೈಮ್ ಟು ಡ್ಯಾನ್ಸ್.' ಈ ಚಿತ್ರದಲ್ಲಿ ವಿಶೇಷ ನೃತ್ಯವೊಂದರಲ್ಲಿ ನಟಿಸಲು ಸಲ್ಮಾನ್ ಖಾನ್ ಒಪ್ಪಿಕೊಂಡಿದ್ದ ಸುದ್ದಿ ಬಂದಿತ್ತು. ಆದರೆ ಅದೇಕೋ ಸಲ್ಮಾನ್ ಈ ಡ್ಯಾನ್ಸ್‌ನಿಂದ ಈಗ ಹಿಂದೆ ಸರಿದಿದ್ದಾನಂತೆ. ಶಾರೂಕ್ ಖಾನ್‌ನ ಹೊಸ ಚಿತ್ರ 'ಝೀರೊ'ದಲ್ಲಿ ಕತ್ರೀನಾ ನಟಿಸುತ್ತಿರುವುದು ಇದಕ್ಕೆ ಕಾರಣ ಇರಬಹುದೆ.. ಎನ್ನುವುದು ಬಾಲಿವುಡ್ ಪಂಡಿತರ ಕುತೂಹಲ. 'ಝೀರೊ' ಚಿತ್ರದಲ್ಲಿ ಕತ್ರೀನಾ ಲುಕ್ ಈಗಾಗಲೆ ಪ್ರಕಟವಾಗಿದ್ದು, ಮಧುಮಗಳ ಮೇಕಪ್‌ನಲ್ಲಿ ಆಕೆ ಮಿಂಚುತ್ತಿದ್ದಾಳೆ. ಏನೇ ಇದ್ದರೂ, ಸಮಕಾಲೀನ ನಟಿಯರಾದ ಕರೀನಾ, ರಾಣಿ, ವಿದ್ಯಾ ಮುಂತಾದವರೆಲ್ಲ ಹಿಂದೆ ಸರಿಯುತ್ತಿರುವಾಗ, ಕತ್ರೀನಾ ಮಾತ್ರ ಇನ್ನಷ್ಟು ಯಂಗ್ ಮತ್ತು ಎನರ್ಜೆಟಿಕ್ ಆಗಿ ಮಿಂಚುತ್ತಿರುವುದು ಸುಳ್ಳಲ್ಲ.

■ ಬಿಂದು





